**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಚಿಕ್ಕೋಡಿ, ಸಾಃ ಚಿಕ್ಕೋಡಿ.**

**ಸಿ.ಸಿ.ನಂ.<u>432/2022</u>**

**<u>ಪಿರ್ಯಾದಿ:</u>** ಕರ್ನಾಟಕ ಸರ್ಕಾರ, ಚಿಕ್ಕೋಡಿ ಪೋಲಿಸ ಠಾಣೆ

**- ವಿರುದ್ಧ -**

**ಆರೋಪಿ:** ನೆಹಾಲ ಶಫೀಕ್ ಬಾಗವಾನ

========

**<u>ದಂಡ ಪ್ರಕಿಯಾ ಸಂಹಿತೆ ಕಲಂ 240 (1) ರಡಿಯಲ್ಲಿ ದೋಷಾರೋಪಣೆ</u>**

ನಾನು ಚಿದಾನಂದ ಬಡಿಗೇರ ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಚಿಕ್ಕೋಡಿ ಈ ಮೂಲಕ ನಿಮ್ಮ ಮೇಲೆ ರಚಿಸುವ ದೋಷಾರೋಪಣೆ ಏನೆಂದರೆ,

1. ನೇಹಾಲ ಶಫೀಕ್ ಬಾಗವಾನ,
   ವಯಸ್ಸುಃ 30 ವರ್ಷ, ಉಃ ಹಣ್ಣಿನ ವ್ಯಾಪಾರ,
   ಸಾಃ ಝುರಿಗಲ್ಲಿ, ಚಿಕ್ಕೋಡಿ, ತಾಃ ಚಿಕ್ಕೋಡಿ, ಜಿಃ ಬೆಳಗಾವಿ.

ಮೊದಲನೇಯದಾಗಿ, ದಿನಾಂಕಃ 11.09.2021 ರಂದು ರಾತ್ರಿ 10.00 ರಿಂದ 10.30 ಗಂಟೆ ಸುಮಾರಿಗೆ ಚಿಕ್ಕೋಡಿ ಪೋಲಿಸ ಠಾಣಾ ವ್ಯಾಪ್ತಿಯ ಚಿಕ್ಕೋಡಿ ಪಟ್ಟಣದ ಝುರಿಗಲ್ಲಿಯ ಮನೆ ನಂಃ 3525/1621 ನೇದ್ದರಲ್ಲಿ ಪಿರ್ಯಾದಿಯು ಮಲಗಿದ್ದಾಗ, ಆರೋಪಿತನಾದ ನೀವು ಪಿರ್ಯಾದಿಗೆ ವಿನಾಕಾರಣ ನಿನ್ನ ಮೈಯಲ್ಲಿ ಸೈತಾನ ಬಂದಿದೆ ಅಂತಾ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 498(ಎ)ರ ಅಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಎರಡನೇಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀವು ಪಿರ್ಯಾದಿಗೆ ಕೈಯಿಂದ ಹೊಡೆದು ಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 323 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಮೂರನೇಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀವು ಪಿರ್ಯಾದಿ ರವರಿಗೆ ಉದ್ರೇಕಿಸುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 504ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 28.10.2022

ಸ್ಥಳಃ ಚಿಕ್ಕೋಡಿ.

**ಪ್ರ.ದ.ನ್ಯಾ ದಂಡಾಧಿಕಾರಿಗಳು,**
**ಚಿಕ್ಕೋಡಿ.**